# <u>ಕರ್ನಾಟಕ ಲೋಕಾಯುಕ್ತ</u>

**ನಂ: ಕಂಪ್ಲೇಂಟ್/ಉಪಲೋಕ್/ಬಿ.ಡಿ./1421/2022**
**ಪಿ.ಓ.ಎ.ಆರ್.ಇ–06 (ಮಂಡನಾಧಿಕಾರಿಗಳ ಶಾಖೆ).**

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು ದಿನಾಂಕ: 29/09/2022.

## <u>ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3) ರ ಅನ್ವಯ ಶಿಫಾರಸ್ಸು ವರದಿ</u>

**<u>ವಿಷಯ:</u> ಶ್ರೀ. ಟಿ.ಎಲ್. ಹರೀಶ್ ಬಿನ್ ಲಕ್ಷ್ಮೀನರಸಯ್ಯ, ಡಾಟಾ ಎಂಟ್ರಿ ಆಪರೇಟರ್, ಬಿ.ಡಿ.ಪುರ ಗ್ರಾಮ ಪಂಚಾಯಿತಿ ಕಛೇರಿ, ಕೊರಟಗೆರೆ ತಾಲೂಕು, ತುಮಕೂರು ಜಿಲ್ಲೆರವರು** ದುರ್ನಡತೆ / ದುರ್ವರ್ತನೆ ತೋರಿದ ಬಗ್ಗೆ.

****

1. ತುಮಕೂರು ನಗರ ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರು (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ **ಶ್ರೀ. ಟಿ.ಎಲ್. ಹರೀಶ್ ಬಿನ್ ಲಕ್ಷ್ಮೀನರಸಯ್ಯ, ಡಾಟಾ ಎಂಟ್ರಿ ಆಪರೇಟರ್, ಬಿ.ಡಿ.ಪುರ ಗ್ರಾಮ ಪಂಚಾಯಿತಿ ಕಛೇರಿ, ಕೊರಟಗೆರೆ ತಾಲೂಕು, ತುಮಕೂರು ಜಿಲ್ಲೆ** (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ). **ಶ್ರೀ. ದತ್ತಾತ್ರೇಯ ಬಿನ್ ಲೇಟ್ ವೀರಣ್ಣ, ವ್ಯವಸಾಯಗಾರರು, ಬೊಮ್ಮಲದೇವಿಪುರ ಗ್ರಾಮ, ಹೊಳವನಹಳ್ಳಿ ಹೋಬಳಿ, ಕೊರಟಗೆರೆ ತಾಲೂಕು** (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಅವರ ಕೆಲಸದ ಬಗ್ಗೆ ಭೇಟಿ ಮಾಡಿದಾಗ 10,000/–ರೂ. ಲಂಚದ ಹಣಕ್ಕೆ ಬೇಡಿಕೆ ಇಟ್ಟು, ಮೊದಲು 5,000/– ರೂ. ಪಡೆದು ನಂತರ 4,000/– ರೂ. ಲಂಚದ ಹಣವನ್ನು ಪಡೆದು ದುರ್ನಡತೆ ತೋರಿಸಿರುವುದು ಕಂಡುಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2)ರಡಿಯಲ್ಲಿ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

2. **ಪ್ರಕರಣದ ಸಂಕ್ಷಿಪ್ತ ಸಾರಾಂಶ :–**

i) ದೂರುದಾರರಾದ **ಶ್ರೀ. ದತ್ತಾತ್ರೇಯ ಬಿನ್ ಲೇಟ್ ವೀರಣ್ಣನವರು** ಬಿ.ಡಿ.ಪುರ ಗ್ರಾಮದಲ್ಲಿ ವಾಸವಿದ್ದು, ಅವರ ಪತ್ನಿ ರತ್ನಮ್ಮಳ ಹೆಸರಿನಲ್ಲಿ ಬಿ.ಡಿ.ಪುರ ಗ್ರಾಮದಲ್ಲಿ ಒಂದು ಸೈಟ್ ಇರುತ್ತದೆ. ದೂರುದಾರರು ಬಿ.ಪಿ.ಎಲ್.

ನಂ.ಕಂಪ್ಲೇಂಟ್/ಉಪಲೋಕ್/ಬಿ.ಡಿ./1421/2022
ಪಿ.ಓ.ಎ.ಆರ್.ಇ–06

ಕಾರ್ಡ್‌ದಾರರಾಗಿದ್ದು ಸರ್ಕಾರದಿಂದ ಬಸವ ವಸತಿ ಯೋಜನೆಯಡಿ ಮನೆಕಟ್ಟಲು ಅನುಮತಿ ದೊರೆತಿರುತ್ತದೆ. ದೂರುದಾರರು ಬಿ.ಡಿ.ಪುರ ಗ್ರಾಮ ಪಂಚಾಯಿತಿ ಆಫೀಸ್‌ಗೆ ಹೋಗಿ ಪಿ.ಡಿ.ಓ.ರವರನ್ನು ಕೇಳಿದಾಗ, ಅವರು ಕೆಲಸ ಮಾಡಿಕೊಡುವುದಾಗಿ ಹೇಳಿರುತ್ತಾರೆ. ಅನಂತರ ಅದೇ ಪಂಚಾಯಿತಿಯಲ್ಲಿ ಕಂಪ್ಯೂಟರ್ ಆಪರೇಟರ್ ಆಗಿರುವ ಎದುರುದಾರರನ್ನು ವಿಚಾರಿಸಿದಾಗ, ದೂರುದಾರರಿಗೆ ಹಣ ಬೇಕಾದರೆ ಅವರ ಮನೆಯ ದಾಖಲೆ ಫೋಟೋಗಳನ್ನು ಅಪ್‌ಲೋಡ್ ಮಾಡಬೇಕು, ಬಿಲ್ ಸ್ಯಾಂಕ್ಷನ್ ಮಾಡಿಸಬೇಕು, ಅದಕ್ಕಾಗಿ ಲಂಚದ ಹಣ ಕೊಡಬೇಕೆಂದು ಎದುರುದಾರರು ಬೇಡಿಕೆ ಇಟ್ಟಿರುತ್ತಾರೆ. ಆಗ ದೂರುದಾರರು ಅವರ ಪತ್ನಿಯ ಬ್ಯಾಂಕ್ ಖಾತೆ ನಂಬರ್‌ನ್ನು ಎದುರುದಾರರಿಗೆ ನೀಡಿ, ಮನೆಯನ್ನು ಕಟ್ಟಲು ಪ್ರಾರಂಭಿಸಿದ್ದರು. ದೂರುದಾರರು ಮನೆಯ ಪಾಯ, ಸಜ್ಜಾ ಮತ್ತು ಶೀಟ್ ಲೆವಲ್ ಕಟ್ಟುವ ಸಮಯದಲ್ಲಿ ಎದುರುದಾರರು ಅವರ ಮನೆಯ ಬಳಿ ಬಂದು ಫೋಟೋಗಳನ್ನು ತೆಗೆದು ಅಪ್‌ಲೋಡ್ ಮಾಡಿದ್ದು ಇರುತ್ತದೆ. ದೂರುದಾರರು ಅವರ ಪತ್ನಿಯ ಹೆಸರಿನಲ್ಲಿ ಕಟ್ಟುತ್ತಿರುವ ಮನೆಗೆ ಬಸವ ವಸತಿ ಯೋಜನೆ ಅಡಿ ಹಣ ಕೂಡ ಬಂದಿರುತ್ತದೆ. ಆಗ ಎದುರುದಾರರು 10,000/– ರೂ. ಲಂಚದ ಹಣವನ್ನು ಕೊಡುವಂತೆ ಬೇಡಿಕೆ ಇಟ್ಟಿರುತ್ತಾರೆ. ದೂರುದಾರರ ಅಂತಿಮ ಬಿಲ್ ಮಂಜೂರು ಆಗಬೇಕಾಗಿದ್ದು, ಆಗ ದೂರುದಾರರು ಸುಮಾರು ಒಂದು ತಿಂಗಳ ಹಿಂದೆ 2–3 ಬಾರಿ ಎದುರುದಾರರ ಕಛೇರಿಗೆ ಬಂದು ಅವರನ್ನು ಭೇಟಿ ಮಾಡಿದಾಗ, ಎದುರುದಾರರು ದೂರುದಾರರ ಬಿಲ್‌ನ್ನು ಪಾಸು ಮಾಡಲು ಅವರ ಕೈನಿಂದ 10,000/– ರೂ. ಹಣ ಕೊಟ್ಟಿದ್ದೇನೆಂದು ಹೇಳಿ ಮೊದಲು 10,000/– ರೂ. ದುಡ್ಡು ಕೊಡಿ ನಿಮ್ಮ ಬಿಲ್ ಪಾಸ್ ಮಾಡಿಸಿಕೊಡುತ್ತೇನೆಂದು ತಿಳಿಸಿದಾಗ, ದೂರುದಾರರು ಅಷ್ಟು ಹಣಕೊಡಲು ಆಗುವುದಿಲ್ಲ ಎಂದಾಗ, ಎದುರುದಾರರು "ನಿನ್ನ ಬಿಲ್ ಹೇಗೆ ಪಾಸ್ ಆಗುತ್ತೋ ನಾನು ನೋಡುತ್ತೇನೆ, 10,000/– ರೂ. ದುಡ್ಡು ತಗೊಂಡು ಈ ಕಛೇರಿಗೆ ಬಂದರೆ ಬಾ, ಇಲ್ಲ ಅಂದರೆ ಬರಬೇಡ, ಕಡಿಮೆ ದುಡ್ಡು ಕೊಟ್ಟರೆ ನಾನು ಇಸ್ಕೋಳಲ್ಲ" ಎಂದು ಹೇಳಿರುತ್ತಾರೆ. ದೂರುದಾರರು ಇದನ್ನು ಅವರ ಮಗ ರಮೇಶನಿಗೆ ಹೇಳಿದಾಗ ಅವನು ಸರ್ಕಾರದಿಂದ ಮಂಜೂರಾದ ಕಾಮಗಾರಿಗೆ ಏಕೆ ನಾವು ಲಂಚದ ಹಣ ಕೊಡಬೇಕು ನೋಡೋಣ ನಾನು ಬರುತ್ತೇನೆಂದು ತಿಳಿಸಿರುತ್ತಾರೆ. ದಿ: 06/11/2019ರಂದು ಬೆಳಿಗ್ಗೆ ಸುಮಾರು 11.30 ಗಂಟೆಗೆ ದೂರುದಾರರು ಅವರ ಮಗ ರಮೇಶನೊಂದಿಗೆ ಗ್ರಾಮ ಪಂಚಾಯಿತಿ ಕಛೇರಿಗೆ ಬಂದು ಎದುರುದಾರರನ್ನು ಭೇಟಿಮಾಡಿ ಅವರ ಬಳಿಯಿದ್ದ 5,000/– ರೂ. ಹಣಕೊಡಲು ಹೋದಾಗ, ಎದುರುದಾರರು ಪೂರ್ಣ 10,000/– ರೂ. ಇಲ್ಲದೇ ಇದ್ದುದರಿಂದ, 5,000/–

ರೂ. ದುಡ್ಡನ್ನು ಬೇಡ ಬೇಡ ಎಂದು ಹೇಳಿದ್ದು, ಆಗ ದೂರುದಾರರು ಉಳಿದ 5,000/– ರೂ. ಹಣವನ್ನು ಮೇಕೆ ಮಾರಾಟಮಾಡಿ ತಂದುಕೊಡುತ್ತೇನೆ ಎಂದಾಗ ಮಾತ್ರ ಎದುರುದಾರರು ಹಣವನ್ನು ಪಡೆದು ಎಣಿಸಿಕೊಂಡಿರುತ್ತಾರೆ. ಈ ದೃಶ್ಯಾವಳಿಯನ್ನು ದೂರುದಾರರ ಮಗನು ಅವನ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾನೆ. ದಿನಾಂಕ 22/11/2019ರಂದು ಮಧ್ಯಾಹ್ನ 1.00 ಗಂಟೆಗೆ ದೂರುದಾರರು ಅವರ ಮೊಬೈಲ್ ನಂ.89714 71908ರಿಂದ ಎದುರುದಾರರ ಮೊಬೈಲ್ ನಂ.79757 07279ಕ್ಕೆ ಕರೆಮಾಡಿ ಮಾತನಾಡಿ ಬಾಕಿಯಿರುವ 5,000/– ರೂ. ಕಡಿಮೆ ಮಾಡಿಕೊಳ್ಳುವಂತೆ ಮನವಿ ಮಾಡಿದಾಗ ಎದುರುದಾರರು 1,000/– ರೂ. ಕಡಿಮೆ ಮಾಡಿಕೊಳ್ಳುವುದಾಗಿ, ಉಳಿಕೆ 4,000/– ರೂ. ಲಂಚದ ಹಣಕೊಡುವಂತೆ ಬೇಡಿಕೆ ಇಟ್ಟಿದ್ದು, ಆ ಸಂಭಾಷಣೆಯನ್ನು ದೂರುದಾರರ ಮಗ ಅವನ ಮೊಬೈಲ್‌ನಲ್ಲಿ ಧ್ವನಿಮುದ್ರಿಸಿಕೊಂಡಿರುತ್ತಾನೆ. ದೂರುದಾರರಿಗೆ ಲಂಚದ ಹಣಕೊಡಲು ಇಷ್ಟವಿಲ್ಲದ್ದರಿಂದ ದೂರುದಾರರು ದಿ: 28/11/2019ರಂದು ಬೆಳಿಗ್ಗೆ 10.00 ಗಂಟೆಗೆ ತುಮಕೂರು ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆಯ ಆರಕ್ಷಕ ಉಪಾಧೀಕ್ಷಕರಿಗೆ ದೂರನ್ನು ಮತ್ತು ಎದುರುದಾರರು ಲಂಚದ ಹಣ ಪಡೆಯುತ್ತಿರುವ ವಿಡಿಯೋವನ್ನು ಮತ್ತು ಎದುರುದಾರರೊಂದಿಗೆ ಮಾತನಾಡಿದ ಸಂಭಾಷಣೆಯಿರುವ ಮೆಮೊರಿ ಚಿಪ್‌ನ್ನು ಪೊಲೀಸರಿಗೆ ನೀಡಿದ್ದು, ಸದರಿ ಠಾಣೆಯ ಠಾಣಾಧಿಕಾರಿಗಳು ಅವರ ಠಾಣೆಯ ಗುನ್ನೆ ನಂ.19/2019 ರಲ್ಲಿ ಕಲಂ 7(ಎ) ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988ರಡಿಯಲ್ಲಿ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುತ್ತಾರೆ.

ii) ದಿ: 28/11/2019ರಂದು ತನಿಖಾಧಿಕಾರಿಯವರು ಪಂಚಸಾಕ್ಷಿದಾರರಾದ 1) ಶ್ರೀ. ಸಂತೋಷ್ ಕುಮಾರ್ ಎಂ. ಬಿನ್ ಮಾರುತೀಶ್ ಎನ್., ಪ್ರಥಮ ದರ್ಜೆ ಸಹಾಯಕರು, ಅಬಕಾರಿ, ಉಪ ಆಯುಕ್ತರ ಕಛೇರಿ, ತುಮಕೂರು ಮತ್ತು 2) ಶ್ರೀ. ಎನ್.ಹೆಚ್. ಪರಶುರಾಮ ಬಿನ್ ಲೇ: ಎನ್. ಹೊನ್ನಪ್ಪ, ದ್ವಿತೀಯ ದರ್ಜೆ ಸಹಾಯಕ, ಸಹಕಾರ ಸಂಘಗಳ ಉಪನಿಬಂಧಕರು, ತುಮಕೂರು ಇವರುಗಳನ್ನು ಠಾಣೆಗೆ ಕರೆಯಿಸಿ ದೂರಿನ ಮಾಹಿತಿಯನ್ನು ನೀಡಿ ತನಿಖೆಗೆ ಸಹಕರಿಸುವಂತೆ ತಿಳಿಸಿದಾಗ, ಪಂಚಸಾಕ್ಷಿದಾರರು ಪಂಚರಾಗಿ ಸಹಕರಿಸಲು ಒಪ್ಪಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರು ದೂರಿನೊಂದಿಗೆ ಹಾಜರುಪಡಿಸಿದ ಮೆಮೊರಿಕಾರ್ಡ್‌ನಲ್ಲಿದ್ದ ವಿಡಿಯೋ ಸಂಭಾಷಣೆಗಳನ್ನು ಲ್ಯಾಪ್‌ಟಾಪ್ ಮುಖಾಂತರ ಡಿ.ವಿ.ಡಿ.ಗೆ ವರ್ಗಾಯಿಸಿ, ಡಿ.ವಿ.ಡಿ.ಯಲ್ಲಿರುವ ಸಂಭಾಷಣೆಗಳನ್ನು ಎಲ್ಲರಿಗೂ

ಕೇಳಿಸಿ, ಆ ಸಂಭಾಷಣೆಗಳನ್ನು ಕ್ರಮವಾಗಿ 1 ಮತ್ತು 2 ಎಂದು ಪಂಚನಾಮೆಯಲ್ಲಿ ಲಿಪಿಕರಣಗೊಳಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಯವರು ಡಿ.ವಿ.ಡಿ.ಯನ್ನು ವಶಪಡಿಕೊಂಡಿರುತ್ತಾರೆ. ದೂರುದಾರರು ಹಾಜರುಪಡಿಸಿದ ಮೆಮೊರಿಕಾರ್ಡ್‌ನ್ನು ಸಹ ತನಿಖಾಧಿಕಾರಿಯವರು ವಶಕ್ಕೆ ಪಡೆದಿರುತ್ತಾರೆ. ತನಿಖಾಧಿಕಾರಿಯವರು ಎದುರುದಾರರಿಗೆ ಕೊಡಬೇಕೆಂದು ತಂದಿರುವ ಹಣವನ್ನು ಹಾಜರುಪಡಿಸುವಂತೆ ದೂರುದಾರರಿಗೆ ತಿಳಿಸಿದಾಗ, ದೂರುದಾರರು 4,000/- ರೂ.ಗಳನ್ನು (500/- ರೂ. ಮುಖಬೆಲೆಯ 8 ನೋಟುಗಳನ್ನು) ಹಾಜರುಪಡಿಸಿರುತ್ತಾರೆ. ತನಿಖಾಧಿಕಾರಿಯವರ ಸೂಚನೆಯಂತೆ ಪಂಚಸಾಕ್ಷಿ-2 ಶ್ರೀ. ಎನ್.ಹೆಚ್. ಪರಶುರಾಮ್ ಹೇಳಿದಂತೆ ಪಂಚಸಾಕ್ಷಿ-1 ಶ್ರೀ. ಸಂತೋಷ್ ಕುಮಾರ್ ಎಂ. ರವರು ಒಂದು ಹಾಳೆಯಲ್ಲಿ ಮತ್ತು ಸಿಬ್ಬಂದಿ ಪಂಚನಾಮೆಯಲ್ಲಿ ನಮೂದಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯವರು ಸಿಬ್ಬಂದಿ ಮುಖಾಂತರ ಸದರಿ ನೋಟುಗಳಿಗೆ ಫಿನಾಪ್ತಲಿನ್ ಪುಡಿಯನ್ನು ಲೇಪಿಸಿ, ಪುಡಿಲೇಪಿತ ನೋಟುಗಳನ್ನು ಪಂಚಸಾಕ್ಷಿ-2ರವರ ಮುಖಾಂತರ ದೂರುದಾರರ ಶರ್ಟಿನ ಮೇಲ್ಭಾಗದ ಜೇಬಿನಲ್ಲಿ ಇಡಿಸಿರುತ್ತಾರೆ. ನಂತರ ತನಿಖಾಧಿಕಾರಿಯವರು ದೂರುದಾರರಿಗೆ ಎದುರುದಾರರ ಬಳಿಹೋಗಿ ದೂರುದಾರರ ಕೆಲಸದ ಬಗ್ಗೆ ವಿಚಾರಿಸಿದಾಗ ಎದುರುದಾರರು ಹಣವನ್ನು ಕೇಳಿದಾಗ ಮಾತ್ರ ನೀಡಬೇಕೆಂದು ಮತ್ತು ಅವರು ಹಣವನ್ನು ಸ್ವೀಕರಿಸಿದ ನಂತರ ಎಲ್ಲಿ ಇಟ್ಟುಕೊಳ್ಳುತ್ತಾರೆಂದು ಗಮನಿಸಿ ಹೊರಗೆ ಬಂದು ದೂರುದಾರರ ಹೆಗಲ ಮೇಲೆ ಇರುವ ಟವೆಲ್‌ನ್ನು ಕೆಳಗೆ ಬೀಳಿಸುವ ಮೂಲಕ ಸೂಚನೆ ನೀಡಬೇಕೆಂದು ತಿಳಿಸಿರುತ್ತಾರೆ. ಅಲ್ಲದೆ, ಪಂಚಸಾಕ್ಷಿ-1ರವರಿಗೆ ದೂರುದಾರರ ಜೊತೆ ಹೋಗಿ ದೂರುದಾರ ಮತ್ತು ಎದುರುದಾರರ ಮಧ್ಯೆ ನಡೆಯುವ ವಿದ್ಯಮಾನಗಳನ್ನು ಗಮನಿಸುವಂತೆ ಸೂಚನೆ ನೀಡಿದ್ದಲ್ಲದೆ, ತನಿಖಾಧಿಕಾರಿಯವರು ದೂರುದಾರರಿಗೆ ಒಂದು ಧ್ವನಿಮುದ್ರಕವನ್ನು ನೀಡಿ ಎದುರುದಾರರನ್ನು ಭೇಟಿಮಾಡಲು ಹೋಗುವಾಗ ಧ್ವನಿಮುದ್ರಕವನ್ನು ಚಾಲನಾ ಸ್ಥಿತಿಯಲ್ಲಿಟ್ಟುಕೊಳ್ಳುವಂತೆ ತಿಳಿಸಿರುತ್ತಾರೆ. ಈ ಬಗ್ಗೆ ತನಿಖಾಧಿಕಾರಿಯವರು ಎಲ್ಲರ ಸಮಕ್ಷಮ ವಿವರವಾದ ಪ್ರಾಯೋಗಿಕ ಪಂಚನಾಮೆಯನ್ನು ಜರುಗಿಸಿರುತ್ತಾರೆ.

iii) ದಿ: 28/11/2019ರಂದು ದೂರುದಾರರು, ನೆರಳುಸಾಕ್ಷಿ ಮತ್ತು ಪಂಚಸಾಕ್ಷಿ ಹಾಗೂ ಸಿಬ್ಬಂದಿಗಳೊಂದಿಗೆ ತನಿಖಾಧಿಕಾರಿಯವರು ಎದುರುದಾರರ ಕಚೇರಿ ಬಳಿ ಮಧ್ಯಾಹ್ನ ಸುಮಾರು 1.20 ಗಂಟೆಗೆ ಬಂದಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರಿಗೆ ಮತ್ತು ನೆರಳುಸಾಕ್ಷಿಗೆ ಸೂಚನೆಗಳನ್ನು

ಮತ್ತೊಮ್ಮೆ ನೆನಪಿಸಿ ಎದುರುದಾರರ ಬಳಿ ಕಳುಹಿಸಿರುತ್ತಾರೆ. ದೂರುದಾರರು ನೆರಳುಸಾಕ್ಷಿಯೊಂದಿಗೆ ಎದುರುದಾರರ ಕಛೇರಿ ಒಳಗೆ ಬಂದಾಗ ಎದುರುದಾರರು ಆಗಲೇ ಹೊರಗಡೆ ಹೊರಟಿದ್ದು, ಆಗ ದೂರುದಾರರು ಎದುರುದಾರರ ಹಿಂದೆ ಹೋಗಿ ಅವರ ಕೆಲಸದ ಬಗ್ಗೆ ವಿಚಾರಿಸಿದಾಗ ಎದುರುದಾರರು ಕೈಸನ್ನೆಯಲ್ಲಿ ಲಂಚದ ಹಣ ಕೇಳಿದ್ದು, ಆಗ ದೂರುದಾರರು ಕೊಡಲು ಜೇಬಿನಲ್ಲಿ ಕೈ ಹಾಕಿದಾಗ ಎದುರುದಾರರು ದೂರುದಾರರನ್ನು ಗ್ರಾಮ ಪಂಚಾಯಿತಿ ಕಟ್ಟಡದ ಬಲಭಾಗದ ಗೋಡೆ ಪಕ್ಕಕ್ಕೆ ಕರೆದುಕೊಂಡು ಹೋಗಿ ದೂರುದಾರರು ಹಣವನ್ನು ನೀಡಿದಾಗ ಅದನ್ನು ಪಡೆದುಕೊಂಡು ಎದುರುದಾರರ ಪ್ಯಾಂಟಿನ ಬಲಭಾಗದ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ನಂತರ ದೂರುದಾರರು ಪಕ್ಕಕ್ಕೆ ಬಂದು ಅವರ ಹೆಗಲಮೇಲಿದ್ದ ಟವಲ್‌ನ್ನು ಕೆಳಕ್ಕೆ ಹಾಕುವ ಮೂಲಕ ತನಿಖಾಧಿಕಾರಿಯವರಿಗೆ ಸೂಚನೆ ನೀಡಿರುತ್ತಾರೆ. ಆಗ ತನಿಖಾಧಿಕಾರಿಯವರು ತನಿಖಾ ತಂಡದೊಂದಿಗೆ ದೂರುದಾರರ ಬಳಿ ಬಂದಿದ್ದು, ದೂರುದಾರರು ಎದುರುದಾರರನ್ನು ತನಿಖಾಧಿಕಾರಿಯವರಿಗೆ ತೋರಿಸಿದ್ದು, ಆಗ ತನಿಖಾಧಿಕಾರಿಯವರು ಎದುರುದಾರರಿಗೆ ಗುರುತಿನ ಚೀಟಿಯನ್ನು ತೋರಿಸಿ ತನಿಖೆಗೆ ಸಹಕರಿಸುವಂತೆ ತಿಳಿಸಿರುತ್ತಾರೆ.

ತನಿಖಾಧಿಕಾರಿಯವರು ಸಿಬ್ಬಂದಿ ಮುಖಾಂತರ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿ, ಎರಡು ಬಟ್ಟಲುಗಳಲ್ಲಿ ತೆಗೆದುಕೊಂಡು, ಒಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಎದುರುದಾರರ ಬಲಗೈ ಬೆರಳುಗಳನ್ನು ಅದ್ದಿಸಿ ತೊಳೆಸಿದಾಗ ಆ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ನಂತರ ಇನ್ನೊಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಎದುರುದಾರರ ಎಡಗೈ ಬೆರಳುಗಳನ್ನು ಅದ್ದಿಸಿ ತೊಳೆಸಿದಾಗ, ಆ ದ್ರಾವಣವು ತಿಳಿಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಆ ದ್ರಾವಣಗಳನ್ನು ಪ್ರತ್ಯೇಕವಾಗಿ ತನಿಖಾಧಿಕಾರಿಯವರು ವಶಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯವರು ಎದುರುದಾರರಿಗೆ ದೂರುದಾರರಿಂದ ಪಡೆದ ಹಣದ ಬಗ್ಗೆ ವಿಚಾರಿಸಿದಾಗ, ಎದುರುದಾರರು ಪ್ಯಾಂಟಿನ ಬಲಭಾಗದ ಜೇಬಿನಲ್ಲಿರುವುದಾಗಿ ತಿಳಿಸಿ ಅದನ್ನು ತೆಗೆದು ಹಾಜರುಪಡಿಸಿರುತ್ತಾರೆ. ಆ ಹಣವನ್ನು ಪಂಚರ ಸಮಕ್ಷಮ ಪರಿಶೀಲಿಸಲಾಗಿ ಆ ಪುಡಿಲೇಪಿತ ನೋಟುಗಳು ಪ್ರಾಯೋಗಿಕ ಪಂಚನಾಮೆಯಲ್ಲಿ ಮತ್ತು ಹಾಳೆಯಲ್ಲಿ ನಮೂದಿಸಿದ ನೋಟುಗಳಿಗೆ ತಾಳೆಯಾದ್ದರಿಂದ ಆ ನೋಟುಗಳನ್ನು ತನಿಖಾಧಿಕಾರಿಯವರು ವಶಕ್ಕೆ ಪಡೆದಿರುತ್ತಾರೆ. ತನಿಖಾಧಿಕಾರಿಯವರು ಎದುರುದಾರರಿಗೆ ಬದಲಿ ಪ್ಯಾಂಟಿನ ವ್ಯವಸ್ಥೆಮಾಡಿ ಅವರು ಧರಿಸಿದ್ದ ಪ್ಯಾಂಟನ್ನು ವಶಕ್ಕೆ ಪಡೆದು ಪುಡಿಲೇಪಿತ ಹಣ ಇಟ್ಟುಕೊಂಡಿದ್ದ ಜೇಬನ್ನು

ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೊಳೆಸಿದಾಗ, ಆ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಆ ದ್ರಾವಣವನ್ನು ಮತ್ತು ಪ್ಯಾಂಟನ್ನು ತನಿಖಾಧಿಕಾರಿಯವರು ವಶಕ್ಕೆ ಪಡೆದಿರುತ್ತಾರೆ.

ತನಿಖಾಧಿಕಾರಿಯವರು ಎದುರುದಾರರಿಗೆ ಸಮಜಾಯಿಷಿ ಬರೆದುಕೊಡುವಂತೆ ತಿಳಿಸಿದಾಗ ಅವರು ಅವರ ಸಮಜಾಯಿಷಿಯಲ್ಲಿ "ಕೊರಟಗೆರೆ ತಾಲೂಕು ಹೊಳವನಹಳ್ಳಿ ಹೋಬಳಿ, ಬಿ.ಡಿ.ಪುರ ಗ್ರಾಮ ಪಂಚಾಯಿತಿಯಲ್ಲಿ ಡಿ.ಇ.ಓ. ಆಗಿ ಕೆಲಸ ನಿರ್ವಹಿಸುತ್ತಿದ್ದು, ದಿ: 28/11/2019ರಂದು ಮಧ್ಯಾಹ್ನ 1.30ರ ಸಮಯದಲ್ಲಿ ಕಛೇರಿಯಲ್ಲಿರುವಾಗ ದತ್ತಾತ್ರೇಯ ಎಂಬುವವರು ನನ್ನ ಹತ್ತಿರ ಬಂದು ಹಣವನ್ನು ನನ್ನ ಟೇಬಲ್ ಮೇಲೆ ಇಟ್ಟು ಹೊರಟುಹೋದರು. ನಾನು ಈ ಹಣ ಯಾವುದೆಂದು ವಿಚಾರಿಸುತ್ತಿರುವಾಗ ಎ.ಸಿ.ಬಿ.ರವರು ನನ್ನನ್ನು ಹಿಡಿದಿರುತ್ತಾರೆ. ಈ ಹಣಕ್ಕೂ ನನಗೂ ಯಾವುದೇ ಸಂಬಂಧವಿರುವುದಿಲ್ಲ"ವೆಂದು ಬರೆದುಕೊಟ್ಟಿರುತ್ತಾರೆ. ಸದರಿ ಸಮಜಾಯಿಷಿಯನ್ನು ದೂರುದಾರರು ಮತ್ತು ನೆರಳುಸಾಕ್ಷಿ ಅಲ್ಲಗಳೆದಿರುತ್ತಾರೆ.

ತನಿಖಾಧಿಕಾರಿಯವರು ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ಲಿಪಿಕರಣಗೊಳಿಸಿದ್ದ ಸಂಭಾಷಣೆಯಲ್ಲಿ ಎದುರುದಾರರು ಮತ್ತು ದೂರುದಾರರ ನಡುವಿನ ಮುಖ್ಯವಾದ ಸಂಭಾಷಣೆಯನ್ನು ಪ್ರತ್ಯೇಕಿಸಿ, ಪ್ರತ್ಯೇಕವಾದ ಹಾಳೆಯಲ್ಲಿ ಪ್ರಿಂಟ್ ತೆಗೆಸಿ, ಆ ಸಂಭಾಷಣೆಯನ್ನು ಎದುರುದಾರರಿಗೆ ಮೂರು ಬಾರಿ ಓದಲು ತಿಳಿಸಿ, ಆ ಸಂಭಾಷಣೆಯನ್ನು ಧ್ವನಿಮುದ್ರಿಸಿಕೊಂಡಿದ್ದು, ಧ್ವನಿಮುದ್ರಿಸಿಕೊಂಡಿದ್ದ ಸಂಭಾಷಣೆಯನ್ನು ಡಿ.ವಿ.ಡಿ.ಗೆ ವರ್ಗಾಯಿಸಿ, ಆ ಡಿ.ವಿ.ಡಿ.ಯನ್ನು ಎದುರುದಾರರ ಮಾದರಿ ಧ್ವನಿಯನ್ನಾಗಿ ತನಿಖಾಧಿಕಾರಿಯವರು ವಶಕ್ಕೆ ಪಡೆದಿರುತ್ತಾರೆ. ಅದೇ ರೀತಿ ದೂರುದಾರರಿಂದ ಆ ಸಂಭಾಷಣೆಯನ್ನು ಮೂರು ಬಾರಿ ಓದಿಸಿ, ಆ ಸಂಭಾಷಣೆಯನ್ನು ಧ್ವನಿಮುದ್ರಿಸಿಕೊಂಡಿದ್ದು, ಧ್ವನಿಮುದ್ರಿಸಿಕೊಂಡಿದ್ದ ಸಂಭಾಷಣೆಯನ್ನು ಡಿ.ವಿ.ಡಿ.ಗೆ ವರ್ಗಾಯಿಸಿ, ಆ ಡಿ.ವಿ.ಡಿ.ಯನ್ನು ದೂರುದಾರರ ಮಾದರಿ ಧ್ವನಿಯನ್ನಾಗಿ ತನಿಖಾಧಿಕಾರಿಯವರು ವಶಕ್ಕೆ ಪಡೆದಿರುತ್ತಾರೆ. ನಂತರ, ತನಿಖಾಧಿಕಾರಿಯವರು ಎದುರುದಾರರ ಮೇಲಾಧಿಕಾರಿಯಾದ ಶ್ರೀ. ಮಂಜುನಾಥ್ ಎಂ.ಎಸ್. ಪಿಡಿಓರವರನ್ನು ಕರೆಯಿಸಿ, ಪ್ರಾಯೋಗಿಕ ಪಂಚನಾಮೆಯಲ್ಲಿ ವಶಕ್ಕೆ ಪಡೆದ ಡಿ.ವಿ.ಡಿ.ಯನ್ನು ಮತ್ತು ಟ್ರ್ಯಾಪ್ ಪಂಚನಾಮೆ ಸಮಯದಲ್ಲಿ ವಶಕ್ಕೆ ಪಡೆದ ಡಿ.ವಿ.ಡಿ.ಯನ್ನು ಅವರಿಗೆ ಕೇಳಿಸಲಾಗಿ, ಅವರು ಎದುರುದಾರರ ಧ್ವನಿಯನ್ನು ಮತ್ತು ಅವರ ಛಾಯಾಚಿತ್ರವನ್ನು ಗುರುತಿಸಿರುತ್ತಾರೆ. ನಂತರ ತನಿಖಾಧಿಕಾರಿಯವರು ದೂರುದಾರರ ಪತ್ನಿಗೆ ಸಂಬಂಧಪಟ್ಟ ದಾಖಲೆಗಳನ್ನು ಎದುರುದಾರರಿಗೆ

ಹಾಜರುಪಡಿಸುವಂತೆ ತಿಳಿಸಿದಾಗ, ಸದರಿ ಕಡತವು ಗ್ರಾಮ ಪಂಚಾಯಿತಿ ಕಾರ್ಯದರ್ಶಿಯವರ ಬೀರುವಿನಲ್ಲಿರುತ್ತದೆ ಎಂದು ತಿಳಿಸಿದ ಮೇರೆಗೆ ತನಿಖಾಧಿಕಾರಿಯವರು ದಾಖಲಾತಿಗಳನ್ನು ಹಾಜರುಪಡಿಸುವ ಬಗ್ಗೆ ನೋಟೀಸ್ ನೀಡಿರುತ್ತಾರೆ. ನಂತರ ಎಲ್ಲರ ಸಮಕ್ಷಮ ಸವಿಸ್ತಾರ ಜಪ್ತಿ ಪಂಚನಾಮೆಯನ್ನು ತನಿಖಾಧಿಕಾರಿಯವರು ನಿರ್ವಹಿಸಿರುತ್ತಾರೆ.

ದಿನಾಂಕ 29/11/2019ರಂದು ಮತ್ತೆ ಪಂಚರನ್ನು ಠಾಣೆಗೆ ಕರೆಯಿಸಿ, ಅಲ್ಲಿಂದ ತನಿಖಾಧಿಕಾರಿಯವರು ಬೆಳಿಗ್ಗೆ 11.30 ಗಂಟೆಗೆ ಕೊರಟಗೆರೆ ತಾಲೂಕು, ಹೊಳವನಹಳ್ಳಿ ಹೋಬಳಿ, ಬೊಮ್ಮಲಾದೇವಿಪುರ ಗ್ರಾಮದ ಗ್ರಾಮ ಪಂಚಾಯಿತಿ ಕಛೇರಿಗೆ ಬಂದಾಗ ಗ್ರಾಮ ಪಂಚಾಯಿತಿಯಲ್ಲಿ ಪಿಡಿಓ ಶ್ರೀ. ಮಂಜುನಾಥ್, ಕಾರ್ಯದರ್ಶಿ ಅಂಜನಪ್ಪ, ಬಿಲ್ ಕಲೆಕ್ಟರ್ ಟಿ.ವಿ. ಕುಮಾರ್ ಹಾಗೂ ಗ್ರಾಮ ಪಂಚಾಯಿತಿಯ ಸಿಬ್ಬಂದಿಗಳು ಮತ್ತು ದೂರುದಾರರು ಸಹ ಹಾಜರಿರುತ್ತಾರೆ. ತನಿಖಾಧಿಕಾರಿಯವರು ಪಿಡಿಓರವರಿಗೆ ಶ್ರೀಮತಿ. ರತ್ನಮ್ಮ ಕೋಂ ದತ್ತಾತ್ರೇಯರವರ ದಾಖಲೆಗಳನ್ನು ಹಾಜರುಪಡಿಸುವಂತೆ ತಿಳಿಸಿದಾಗ, ಅವರು ಕಾರ್ಯದರ್ಶಿಯವರಿಗೆ ಕಡತವನ್ನು ಹಾಜರುಪಡಿಸುವಂತೆ ತಿಳಿಸಿದ್ದು, ಒಟ್ಟು 18 ದಾಖಲಾತಿಗಳನ್ನು ಹಾಜರುಪಡಿಸಿದ್ದು, ಆ ದಾಖಲಾತಿಗಳ ಜೆರಾಕ್ಸ್ ಪ್ರತಿಗಳನ್ನು ಪಡೆದು, ಪಿಡಿಓರವರು ದೃಢೀಕರಿಸಿದ ನಂತರ ವಶಪಡಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಯವರು ಪಿಡಿಓರವರ ಮುಖಾಂತರ ಸಿಸಿಟಿವಿ ಟೆಕ್ನಿಷಿಯನ್ ಆದ ಶ್ರೀ. ರಕ್ಷಿತ್ ಬಿನ್ ನಾಗೇಂದ್ರಪ್ಪರವರನ್ನು ಕಛೇರಿಗೆ ಕರೆಯಿಸಿ ಪಿಡಿಓರವರ ಆದೇಶದಂತೆ ಅವರು ದಿ: 06/11/2019ರ ಬೆಳಿಗ್ಗೆ 11.20ರಿಂದ 11.27ರವರೆಗಿನ ದೃಶ್ಯಾವಳಿ ಮತ್ತು ದಿ: 28/11/2019ರ ಮಧ್ಯಾಹ್ನ 1.13ರಿಂದ 1.20ರವರೆಗಿನ ದೃಶ್ಯಾವಳಿಗಳನ್ನು ಕಾಪಿಮಾಡಿ ಒಂದು ಡಿ.ವಿ.ಡಿ.ಗೆ ವರ್ಗಾಯಿಸಿ, ಪಂಚರ ಸಮಕ್ಷಮ ನೀಡಿದ ಡಿ.ವಿ.ಡಿ.ಯನ್ನು ತನಿಖಾಧಿಕಾರಿಯವರು ಎಲ್ಲರ ಸಹಿಯನ್ನು ಪಡೆದು ವಶಕ್ಕೆ ಪಡೆದಿದ್ದು, ಈ ಬಗ್ಗೆ ಪಂಚನಾಮೆಯನ್ನು ತನಿಖಾಧಿಕಾರಿಯವರು ನಿರ್ವಹಿಸಿರುತ್ತಾರೆ.

iv) ತನಿಖಾಧಿಕಾರಿಯವರು ಸಾಕ್ಷಿದಾರರ ಹೇಳಿಕೆ ಮತ್ತು ದಾಖಲೆಗಳನ್ನು ಕಲೆ ಹಾಕಿ, ರಾಸಾಯನಿಕ ತಜ್ಞರ ಪರೀಕ್ಷಾ ವರದಿಯನ್ನು ಮತ್ತು ಅಭಿಯೋಜನಾ ಮಂಜೂರಾತಿಯನ್ನು ಪಡೆದು ಎದುರುದಾರರ ವಿರುದ್ಧ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ.

v) ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು ಹಾಗೂ ತನಿಖಾಧಿಕಾರಿಯವರು ಸಂಗ್ರಹಿಸಿದ ದಾಖಲೆ, ರಾಸಾಯನಿಕ ವರದಿಯಿಂದ ಎದುರುದಾರರಿಂದ ವಶಪಡಿಸಿಕೊಂಡ ಮುದ್ದೆಮಾಲುಗಳಲ್ಲಿ ಫಿನಾಪ್ತಲಿನ್ ಆಂಶ ಕಂಡುಬಂದಿರುತ್ತದೆ ಹಾಗೂ ಇತರೆ ಅಂಶಗಳು, ಎದುರುದಾರರ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

3. ಎದುರುದಾರರಿಗೆ ಪರಿವೀಕ್ಷಣಾ ಟಿಪ್ಪಣಿಯನ್ನು ಕಳುಹಿಸಿದ್ದು, ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿಯನ್ನು ದಿ: 02/06/2022ರಂದು ಸಲ್ಲಿಸಿರುತ್ತಾರೆ. ಎದುರುದಾರರು ಅವರ ಆಕ್ಷೇಪಣೆಯಲ್ಲಿ ಪರಿವೀಕ್ಷಣಾ ಟಿಪ್ಪಣಿಯ ಎಲ್ಲಾ ಅಂಶಗಳನ್ನು ಅಲ್ಲಗಳೆದಿರುತ್ತಾರೆ. ಎದುರುದಾರರು ಅವರ ಸಮಜಾಯಿಷಿಯ ಅಂತಿಮ ಪ್ಯಾರಾದಲ್ಲಿ ಭ್ರಷ್ಟಾಚಾರ ನಿಗ್ರಹದಳ ಪೊಲೀಸರು ಈಗಾಗಲೇ ದೋಷಾರೋಪಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಸದರಿ ಪ್ರಕರಣ ವಿಚಾರಣಾ ಹಂತದಲ್ಲಿರುವುದರಿಂದ ಒಂದೇ ವಿಷಯಕ್ಕೆ ಸಂಬಂಧಪಟ್ಟಂತೆ ಇಲಾಖಾ ವಿಚಾರಣೆ ನಡೆಸಲು ಬರುವುದಿಲ್ಲವೆಂದು ತಿಳಿಸುತ್ತಾ ಇಲಾಖಾ ವಿಚಾರಣೆಯನ್ನು ಕೈಬಿಡಬೇಕೆಂದು ಕೋರಿರುತ್ತಾರೆ. ಈ ಪ್ರಕರಣದಲ್ಲಿ ಎದುರುದಾರರಿಂದ ತನಿಖಾಧಿಕಾರಿಯವರು ಸಂಗ್ರಹಿಸಿದ ಮುದ್ದೆಮಾಲುಗಳಲ್ಲಿ ಫಿನಾಪ್ತಲೀನ್ ಅಂಶ ಇರುವುದು ಕಂಡುಬಂದಿರುತ್ತದೆ. ಈ ಎಲ್ಲಾ ಕಾರಣಗಳಿಂದ ಮತ್ತು ಸಮಜಾಯಿಷಿಯ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳಾಗಿ ಕಂಡುಬರುವುದಿಲ್ಲ.

4. ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆಗಳು, ರಾಸಾಯನಿಕ ತಜ್ಞರ ಪರೀಕ್ಷಾವರದಿ ಹಾಗೂ ದೋಷಾರೋಪಣ ಪತ್ರದಲ್ಲಿರುವ ಮಾಹಿತಿಗಳಿಂದ ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಎದುರುದಾರರ ವಿರುದ್ಧ ನಡವಳಿಯನ್ನು ಕೈಬಿಡಲು ಸೂಕ್ತ / ಸಮಂಜಸ / ಸಮಾಧಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

5. ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 2 (12) ರ ಪ್ರಕಾರ ಎದುರುದಾರರು ಸರ್ಕಾರಿ / ಸಾರ್ವಜನಿಕ ನೌಕರರಾಗಿದ್ದು, ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ನಿಷ್ಠೆ ತೋರಿಸದೆ ಭ್ರಷ್ಟಾಚಾರವೆಸಗಿ ಕ.ನಾ.ಸೇ. (ನಡತೆ) ನಿಯಮಗಳು 1966 ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ.

(ನಡತೆ) ನಿಯಮಗಳು 2021 ನಿಯಮ (i) ರಿಂದ (iv)) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಎದುರುದಾರರಾದ ಶ್ರೀ. ಟಿ.ಎಲ್. ಹರೀಶ್ ಬಿನ್ ಲಕ್ಷ್ಮೀನರಸಯ್ಯ, ಡಾಟಾ ಎಂಟ್ರಿ ಆಪರೇಟರ್, (ನಿವೃತ್ತಿ ದಿ:31/10/2044) ರವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಇಲಾಖಾ ವಿಚಾರಣೆಯನ್ನು ಮಾಡಲು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14(ಎ)ರಡಿ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರಡಿ ಪ್ರದತ್ತವಾದ ಅಧಿಕಾರದಡಿ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

6. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ, ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

29/9/22

**(ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ)**
ಉಪಲೋಕಾಯುಕ್ತರು–2,
ಕರ್ನಾಟಕ ರಾಜ್ಯ, ಬೆಂಗಳೂರು.